# ಉಪಗ್ರಹಕ್ಕೆ ಟ್ರಾನ್ಸ್‌ಪಾಂಡರ್‌ಗಳ ರವಾನೆ: ಇಸ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಗ್ರಹದ ಸಾಮರ್ಥ್ಯ ಹೆಚ್ಚಿಸುವುದಕ್ಕಾಗಿ 48 ಟ್ರಾನ್ಸ್‌ಪಾಂಡರ್‌ಗಳನ್ನು (ರೇಡಿಯೊ ಸಂಕೇತಗಳನ್ನು ಗ್ರಹಿಸಿ ಸ್ವಯಂಚಾಲಿತವಾಗಿ ಬೇರೆ ಸಂಕೇತಗಳನ್ನು ಬಿತ್ತರಿಸುವ ಸಾಧನ) ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಅಂತರಿಕ್ಷಕ್ಕೆ ಕಳುಹಿಸಲಿದೆ.

ತುಮಕೂರು ರಸ್ತೆಯ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಬುಧವಾರ, ಇಸ್ರೊ ಮತ್ತು ಭಾರತೀಯ ಕೈಗಾರಿಕೆಗಳ ಒಕ್ಕೂಟ (ಸಿಐಐ) ಜಂಟಿಯಾಗಿ ಆಯೋಜಿಸಿದ್ದ 'ಬೆಂಗಳೂರು ಬಾಹ್ಯಾಕಾಶ ಮೇಳ–2014'ದಲ್ಲಿ ಮಾತನಾಡಿದ ಇಸ್ರೊ ಅಧ್ಯಕ್ಷ ಕೆ. ರಾಧಾಕೃಷ್ಣನ್, 'ಉಪಗ್ರಹದ ಸಾಮರ್ಥ್ಯ ಹೆಚ್ಚಳಕ್ಕೆ ದೇಶದಲ್ಲಿ ಭಾರಿ ಬೇಡಿಕೆ ಇರುವುದರಿಂದ ಫ್ರಾನ್ಸ್‌ನ ಏರಿಯಾನೆ ರಾಕೆಟ್ ಮೂಲಕ ಟ್ರಾನ್ಸ್‌ಪಾಂಡರ್‌ಗಳನ್ನು ಕಳುಹಿಸ ಲಾಗುವುದು' ಎಂದರು.

'ದೇಶದ ಮಾಧ್ಯಮ ಕ್ಷೇತ್ರವು (ಟಿವಿ ಮಾಧ್ಯಮ) ಭಾರಿ ವೇಗದಲ್ಲಿ ವಿಸ್ತಾರಗೊಳ್ಳುತ್ತಿದೆ. ಆದರೆ ಉಪಗ್ರಹದ ಸಾಮರ್ಥ್ಯ ಹೆಚ್ಚಾಗಿಲ್ಲ' ಎಂದು ಅವರು ಹೇಳಿದರು.

ಇದುವರೆಗೆ ಭಾರತವು 180 ಟ್ರಾನ್ಸ್‌ಪಾಂಡರ್‌ಗಳನ್ನು ಕಳುಹಿಸಿದೆ. 48 ಹೊಸ ಸಾಧನಗಳು ಸದ್ಯದ ಬೇಡಿಕೆ ಪೂರೈಸಲಿವೆ. 11ನೇ ಪಂಚ ವಾರ್ಷಿಕ ಯೋಜನೆ ಅಡಿಯಲ್ಲಿ 2012ರ ಅಂತ್ಯದ ಒಳಗೆ ಇಸ್ರೊ ಇಂತಹ 500 ಸಲಕರಣೆಗಳನ್ನು ಹೊಂದಿರಬೇಕಿತ್ತು. ಆದರೆ, ಆ ಗುರಿ ತಲುಪಲು ಸಾಧ್ಯವಾಗಿಲ್ಲ. ಆದರೆ, ದೇಶದಲ್ಲಿ ಖಾಸಗಿ ಚಾನೆಲ್, ಪ್ರಸಾರ ವಲಯ, ದೂರಸಂಪರ್ಕ ಸೇವೆ, ಸಂವಹನ ಸೇವೆಗಳನ್ನು ಒದಗಿಸುವ ಸಂಸ್ಥೆಗಳಿಂದ ಬಂದಿರುವ ಬೇಡಿಕೆಗಳನ್ನು ಗಮನದಲ್ಲಿಟ್ಟು ಕೊಂಡು ಏರಿಯಾನೆ ರಾಕೆಟ್ ಮೂಲಕ ಉಡಾಯಿಸಲಾಗುವ 'ಜಿಸ್ಯಾಟ್–6' ಉಪಗ್ರಹದಲ್ಲಿ ಹೆಚ್ಚುವರಿ 48 ಟ್ರಾನ್ಸ್‌ಪಾಂಡರ್‌ಗಳನ್ನು ರವಾನಿಸಲಾಗುವುದು' ಎಂದರು.

2017ರ ವೇಳೆಗೆ ಇಸ್ರೊ 400 ಟ್ರಾನ್ಸ್‌ಪಾಂಡರ್‌ಗಳನ್ನು ಹೊಂದಿರಲಿದೆ ಎಂದೂ ಅವರು ಹೇಳಿದರು.